# ವಿದ್ಯಾರ್ಥಿಗಳನ್ನು ಕಲಿಕೆಯತ್ತ ತೊಡಗಿಸಲು ಅರ್ಥಪೂರ್ಣ ಮಾರ್ಗಗಳು

ಮಾಳವಿಕಾ ರಾಜ್‌ನಾರಾಯಣ್ ಮತ್ತು ಜಿತಂದ್ರ ಶರ್ಮಾ

***

**ಅಜೀಂ ಪ್ರೇಮ್‌ಜಿ ಶಾಲೆಗಳ ಗುರಿ:**

ನಮ್ಮ ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಅಜೀಂ ಪ್ರೇಮ್‌ಜಿ ಪಬ್ಲಿಕ್ ಶಾಲೆಗಳು ಅವಿಭಾಜ್ಯ ಅಂಗಗಳಾಗಿವೆ. ಈ ಶಾಲೆಗಳ ಪ್ರಾಥಮಿಕ ಉದ್ದೇಶವೇನೆಂದರೆ, ಎಂಥದೇ ಸಮಸ್ಯೆ ಎದುರಿಸುತ್ತಿದ್ದರೂ, ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿಯೂ (ಸರ್ಕಾರಿ) ಉತ್ತಮ ಹಾಗೂ ಸಮಾನ ಶಿಕ್ಷಣವನ್ನು ಕೊಡುವುದು ಸಾಧ್ಯವಿದೆ ಎಂಬುದನ್ನು ಸಾಬೀತುಪಡಿಸುವುದು. ಇದನ್ನು ಪ್ರತಿಕೂಲ ಹಿನ್ನೆಲೆಯಿಂದ ಬಂದ ಮಕ್ಕಳು ಕಲಿಯಲಾರರು ಎನ್ನುವ ಸಾಮಾನ್ಯವಾದ ಅಭಿಪ್ರಾಯವನ್ನು ಪ್ರಶ್ನಿಸುವುದಕ್ಕಾಗಿ ಮಾತ್ರ ಮಾಡುತ್ತಿರುವುದಲ್ಲ: ಬದಲಾಗಿ, ಸಮಾನತೆ ಹಾಗೂ ಗುಣಮಟ್ಟವನ್ನು ಉತ್ತಮಪಡಿಸಿಕೊಳ್ಳಲು ಪಬ್ಲಿಕ್ ಶಾಲೆಗಳು ಯಾವ ನಿರ್ದಿಷ್ಟ ಕಾರ್ಯವಿಧಾನಗಳನ್ನು ಅನುಸರಿಸಬೇಕು ಎನ್ನುವುದನ್ನು ತಿಳಿಸಲು. ನಮ್ಮ ನಿರಂತರ ಪ್ರಯತ್ನಗಳ ಉದ್ದೇಶ– ವಿದ್ಯಾರ್ಥಿಗಳಲ್ಲಿ ವರ್ಗ ಮಟ್ಟದ ಸ್ಪರ್ಧಾತ್ಮಕತೆ ಮಾತ್ರವಲ್ಲದೆ ವಯೋಮಾನಕ್ಕೆ ಅನುಗುಣವಾದ ಇನ್ನಿತರ ಕೌಶಲಗಳು/ಸಾಮರ್ಥ್ಯಗಳು ಅಂದರೆ, ಸಂವಹನ, ಕರಕುಶಲಕಲೆ ಮತ್ತು ತಂಡದಲ್ಲಿ ಕೆಲಸ ಮಾಡುವಿಕೆ ಹಾಗೂ ವ್ಯವಸ್ಥಿಗೊಳಿಸುವಿಕೆ, ಸ್ಥಿತಿಸ್ಥಾಪಕ ಗುಣ ಹಾಗೂ ಬೇರೆಯವರ ಬಗ್ಗೆ ಸೂಕ್ಷ್ಮತೆಯನ್ನು ಬೆಳೆಸುವುದಾಗಿದೆ.

ಈ ಲೇಖನವು ಕೋವಿಡ್–೧೯ ಸಾಂಕ್ರಾಮಿಕದ ವೇಳೆ ಛತ್ತೀಸ್‌ಗಢ, ಕರ್ನಾಟಕ, ರಾಜಾಸ್ಥಾನ ಮತ್ತು ಉತ್ತರಾಖಂಡದ ಜಿಲ್ಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎಂಟು ಶಾಲೆಗಳ ಹತ್ತಿರವಿರುವ ಗ್ರಾಮಗಳು ಮತ್ತು ನಗರಗಳ ಮಕ್ಕಳ ಶೈಕ್ಷಣಿಕ ಅಗತ್ಯಗಳನ್ನು ಹೇಗೆ ನಿರ್ವಹಿಸಲಾಯಿತು ಎಂಬ ಅನುಭವವನ್ನು ಪ್ರತಿಫಲಿಸುತ್ತದೆ. ನಮ್ಮ ಎಲ್ಲ ಶಾಲೆಗಳು ದೇಶದ ಅತ್ಯಂತ ಅನನುಕೂಲಕರ ಪ್ರದೇಶಗಳಲ್ಲಿರುವುದರಿಂದ, ಅಲ್ಲಿ ಡಿಜಿಟಲ್ ಕಲಿಕೆ ಸಾಧ್ಯವಿರಲಿಲ್ಲ. ಆನ್‌ಲೈನ್ ವಿಧಾನವನ್ನು ಕಂಡುಕೊಂಡ ಆರಂಭದ ಹಂತದಲ್ಲಿ ನಾವು ಶೇ.೪೦ರಷ್ಟು ಮಕ್ಕಳನ್ನು ಮಾತ್ರವೇ ತಲುಪಲು ಸಾಧ್ಯವಾಯಿತು. ಮತ್ತು, ಇಲ್ಲಿ ಕೂಡ ಈ ವಿಧಾನ ಪರಿಣಾಮಕಾರಿಯಾಗಿಲ್ಲದೆ ಇರುವುದು ಕಂಡುಬಂತು. ಇದರಿಂದಾಗಿ, ಶಾಲಾ ತಂಡಗಳು ಬೋಧನೆ–ಕಲಿಕೆ ಪ್ರಕ್ರಿಯೆಯ ನಾನಾ ವಿವರಗಳ ಬಗ್ಗೆ ಮರುಚಿಂತನೆ ನಡೆಸಬೇಕಾಯಿತು ಹಾಗೂ ವಿದ್ಯಾರ್ಥಿಗಳೊಡನೆ ತೊಡಗಿಕೊಳ್ಳುವ ಬಹುಮುಖಿ ವಿಧಾನಗಳನ್ನು ಯೋಜಿಸಬೇಕಾಯಿತು. ವಿದ್ಯಾರ್ಥಿಗಳು ಈಗಾಗಲೇ ಕಲಿತದ್ದನ್ನು ಮರೆಯದಂತೆ, ಅವರ ಕಲಿಕೆಯನ್ನು ಕುಸಿಯದಂತೆ ನೋಡಿಕೊಳ್ಳುವ ಮುಖ್ಯ ಉದ್ದೇಶದೊಂದಿಗೆ ನಾವು ವಿದ್ಯಾರ್ಥಿಗಳೊಂದಿಗೆ ತೊಡಗಿಕೊಳ್ಳಲು ಅರ್ಥಪೂರ್ಣ ಮಾರ್ಗಗಳನ್ನು ಹುಡುಕಲು ಆರಂಭಿಸಿದೆವು. ಆದ್ದರಿಂದ, ನಮ್ಮ ಎಲ್ಲ ಪ್ರಯತ್ನಗಳು (ಎ) ಎಲ್ಲ ವರ್ಗಗಳ ಎಲ್ಲ ವಿದ್ಯಾರ್ಥಿಗಳೂ ಪ್ರಾಥಮಿಕ ಸಾಕ್ಷರತೆ ಮತ್ತು ಸಂಖ್ಯಾ ಜ್ಞಾನದಲ್ಲಿ ತಾರ್ಕಿಕ ಸ್ಪರ್ಧಾತ್ಮಕ ಮಟ್ಟವನ್ನು ಹೊಂದಿರುವಂತೆ ಖಾತ್ರಿಗೊಳಿಸುವುದು ಮತ್ತು (ಬಿ) ಗರಿಷ್ಠ ಕಲಿಕೆಗೆ ಎಲ್ಲ ಲಭ್ಯ ವಿಧಾನ ಮತ್ತು ಸಂಪನ್ಮೂಲಗಳನ್ನು ಅತ್ಯುತ್ತಮವಾಗಿ ಬಳಸುವುದು.

ಹಂತ ೧.............................................................ಹಂತ ೨................................ಹಂತ ೩

ಮಾ.೨೦, ಏಪ್ರಿಲ್ ೨೦, ಮೇ ೨೦................... ಜೂನ್ ೨೦.............................ಜು.೨೦, ಆ.೨೦,ಸೆ.೨೦, ಅ.೨೦, ನ.೨೦, ಡಿ.೨೦, ಜ.೨೦೨೧, ಫೆ.೨೧, ಮಾ.೨೧

ಮನೆ ಪಾಠ................ಮನೆಗೆ ಭೇಟಿ..............ಗ್ರಾಮಾಧರಿತ ಗುಂಪುಗಳಿಗೆ ವೈಯಕ್ತಿಕ ಭೇಟಿ, ಆರಂಭದಲ್ಲಿ ಸಣ್ಣ ಸಂಖ್ಯೆಯ ಬಹುಹಂತದ ಬಹುವರ್ಗದ ಗುಂಪುಗಳು. ಆನಂತರ ಗುಂಪುಗಳನ್ನು ಒಗ್ಗೂಡಿಸಿ ಬಹುಹಂತದ ವರ್ಗಾಧರಿತ ಗುಂಪುಗಳ ರಚನೆ.
(ರಾಜಾಸ್ಥಾನದ ಟೋಂಕ್‌ನಲ್ಲಿ ವಿದ್ಯಾರ್ಥಿಗಳ ತೊಡಗಿಸಿಕೊಳ್ಳುವಿಕೆಯ ಟೈಮ್‌ಲೈನ್)

**ವಿದ್ಯಾರ್ಥಿಗಳನ್ನು ಕಲಿಕೆಯಲ್ಲಿ ತೊಡಗಿಸಿಕೊಳ್ಳುವ ನಾನಾ ವಿಧಗಳು:**

*ಆನ್‌ಲೈನ್ ವಿಧಾನ:* ೨೦೨೦ರಲ್ಲಿ ನಮ್ಮ ಹೆಚ್ಚಿನ ಶಿಕ್ಷಕರ ಬಳಿ ಲ್ಯಾಪ್‌ಟಾಪ್ ಇಲ್ಲದ ಕಾರಣ, ಯಾವುದೇ ಸಂಶೋಧನೆ ಅಥವಾ ವಿಷಯ ಸಿದ್ಧಗೊಳಿಸುವಿಕೆಗೆ ಆನ್‌ಲೈನ್ ಬಳಕೆ ಒಂದು ಸವಾಲಾಗಿತ್ತು. ಇದು ಶಿಕ್ಷಕರು ಪರಸ್ಪರ ಒಬ್ಬರು ಇನ್ನೊಬ್ಬರಿಂದ ಕಲಿಯುವುದು ಮತ್ತು ಸಹಕರಿಸುವುದಕ್ಕೆ ದಾರಿ ಮಾಡಿಕೊಟ್ಟಿತು. ಮೊದಲ ಹಂತದಲ್ಲಿ ಆನ್‌ಲೈನ್ ವಿಧಾನದ ಮೂಲಕ ವಿದ್ಯಾರ್ಥಿಗಳ ತೊಡಗಿಸಿಕೊಳ್ಳುವಿಕೆಗೆ ಸಂಬಂಧಿಸಿದಂತೆ ಕಂಡುಬಂದಿದ್ದೇನೆಂದರೆ, ಸ್ಮಾರ್ಟ್‌ಫೋನ್‌ನ ಲಭ್ಯತೆ, ಕಾರ್ಯಜಾಲ ಸಂಪರ್ಕ, ಡೇಟಾ ರಿಚಾರ್ಜ್(ಮರುದುಂಬಿಸಲು)ಗೆ ಹಣ ಹೊಂದಿಸುವುದು, ಒಡಹುಟ್ಟಿದವರೊಡನೆ ಮೊಬೈಲ್ ಹಂಚಿಕೊಳ್ಳುವಿಕೆ ಇವೆಲ್ಲವೂ ಆನ್‌ಲೈನ್ ಕಲಿಕೆಯನ್ನು ಕಡಿಮೆ ಕಾರ್ಯಸಾಧ್ಯಗೊಳಿಸಿತ್ತು ಮತ್ತು ಹಲವು ಮಕ್ಕಳನ್ನು ಕಲಿಕೆಯಿಂದ ಹೊರಹಾಕಿತ್ತು.

*ಕಾರ್ಯಹಾಳೆಯನ್ನು ಆಧರಿಸಿದ ತೊಡಗಿಸಿಕೊಳ್ಳುವಿಕೆ:*
ಸಾಮಾನ್ಯವಾಗಿ ನಿರ್ದಿಷ್ಟ ಪರಿಕಲ್ಪನೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಿದ ಬಳಿಕ ಅವರಿಗೆ ಕಾರ್ಯಹಾಳೆಯನ್ನು ನೀಡಲಾಗುತ್ತದೆ. ಶಿಕ್ಷಕರ ಬೆಂಬಲ ಕನಿಷ್ಠ ಪ್ರಮಾಣದಲ್ಲಿರುವ ಸ್ವಯಂಕಲಿಕಾ ಕಾರ್ಯಹಾಳೆಗಳನ್ನು ವಿನ್ಯಾಸಗೊಳಿಸುವ ಆಲೋಚನೆಯು ಶಿಕ್ಷಕರಿಗೆ ಹೊಸತಾಗಿರುತ್ತದೆ. ಇದಕ್ಕೆ ಸೇರ್ಪಡೆಗೊಳ್ಳುವ ಇನ್ನೊಂದು ಸವಾಲೆಂದರೆ, ನಾನಾ ಸಾಮರ್ಥ್ಯಗಳಿರುವ ವಿದ್ಯಾರ್ಥಿಗಳಿಗೆ ಇದನ್ನು ಸರಿಹೊಂದಿಸುವುದು ಮತ್ತು ಮೂಲಭೂತ ಸಾಕ್ಷರತಾ ಕೌಶಲಗಳಿಲ್ಲದೆ ಪರದಾಡುವ ವಿದ್ಯಾರ್ಥಿಗಳಿಗೆ ಏನು ಮಾಡುವುದು? ಅಥವಾ, ಸಂಗೀತ, ಕಲೆ ಮತ್ತು ದೈಹಿಕ ಶಿಕ್ಷಣದಂಥ ವಿಷಯಗಳಲ್ಲಿ ಏನು ಮಾಡುವುದು? ಎಂಟು ವಾರಗಳ ಕಾಲ ವಿನ್ಯಾಸಗೊಳಿಸುವಿಕೆ, ಹಂಚಿಕೆ ಹಾಗೂ ಮಕ್ಕಳ ಕೆಲಸವನ್ನು ಪುನರ್ವಿಮರ್ಶಿಸಿದ ಬಳಿಕ ಶಿಕ್ಷಕರು ಈ ವಿಧಾನದಲ್ಲಿ ಹಲವು ದೋಷಗಳನ್ನು ಕಂಡುಕೊಂಡರು. ವಿಷಯಗಳನ್ನು ಓದುವಲ್ಲಿ ಮತ್ತು ಕಾರ್ಯಹಾಳೆ ಬಗ್ಗೆ ಬಂದ ಪ್ರತಿಕ್ರಿಯೆಯನ್ನು ಅರ್ಥಮಾಡಿಕೊಳ್ಳುವಲ್ಲಿ ಮಗುವಿನ ಅಸಾಮರ್ಥ್ಯದಿಂದ ಹಿಡಿದು, ಕಾರ್ಯಹಾಳೆಗಳನ್ನು ವಿವರಿಸಲು ಶಿಕ್ಷಕರಿಗೆ ಸಮಯದ ಕೊರತೆ, ಪೋಷಕರು ಮತ್ತು ಒಡಹುಟ್ಟಿದವರು ಮಕ್ಕಳ ಪರವಾಗಿ ಕಾರ್ಯಹಾಳೆಯನ್ನು ತುಂಬಿಸುವುದು– ಇದೆಲ್ಲದರಿಂದಾಗಿ, ಕಾರ್ಯಹಾಳೆಗಳನ್ನು ವಿನ್ಯಾಸಗೊಳಿಸಲು ಹಾಕಿದ ಶ್ರಮವು ವಿದ್ಯಾರ್ಥಿಗಳಲ್ಲಿ ಕಲಿಕೆಯ ಫಲಿತಾಂಶ ನೀಡುತ್ತಿಲ್ಲ ಎಂದು ಶಿಕ್ಷಕರು ತೀರ್ಮಾನಿಸಿದರು.

*ಬಹುವರ್ಗದ ಗುಂಪುಗಳೊಡನೆ ಸಮುದಾಯದಲ್ಲಿ ಕಲಿಕೆ:*
ಮುಖಾಮುಖಿ ತೊಡಗಿಸಿಕೊಳ್ಳುವಿಕೆ ಆರಂಭವಾದಾಗ, ಅದು ಅತಿ ಸಣ್ಣ, ೧೦–೧೨ ವಿದ್ಯಾರ್ಥಿಗಳ ಬಹು ವರ್ಗಗಳ ಗುಂಪುಗಳಲ್ಲಿ ನಡೆಯಿತು. ಪ್ರಾಥಮಿಕ ಸಾಕ್ಷರತೆ ಹಾಗೂ ಸಂಖ್ಯಾ ಕೌಶಲಗಳನ್ನು ಅಭಿವೃದ್ಧಿಪಡಿಸಲು ಹಾಗೂ ಮುಂದುವರಿಸಲು ಆದ್ಯತೆ ನೀಡಲಾಯಿತು. ಶಿಕ್ಷಕರು ಯಾವ ವಿಷಯ ಕಲಿಸುವಲ್ಲಿ ಪರಿಣಿತಿ

ಹೊಂದಿದ್ದಾರೆ ಎಂಬುದನ್ನು ಇಲ್ಲಿ ಪರಿಗಣಿಸಲಿಲ್ಲ. ಇದರಿಂದ ಎಲ್ಲ ಶಿಕ್ಷಕರು ಓದುವಾಗಲೇ ಗ್ರಹಿಸುವಿಕೆ ಮತ್ತು ಸರಾಗವಾಗಿ ಬರೆಯುವಿಕೆಯನ್ನು ಮುಖ್ಯ ಗುರಿಯಯಾಗಿಟ್ಟುಕೊಂಡೇ, ಎಲ್ಲ ವಿಷಯಗಳ ನಿರ್ದಿಷ್ಟ ವಸ್ತುವಿನ ನಾನಾ ಪರಿಕಲ್ಪನೆಗಳ ಕಲಿಕೆಯನ್ನು ಯೋಜಿಸಿದರು. ಗ್ರಂಥಾಲಯದ ಪುಸ್ತಕಗಳು ಓದಿನ ಬಗ್ಗೆ ಮಕ್ಕಳಲ್ಲಿ ಆಸಕ್ತಿಯನ್ನು ಹುಟ್ಟಿಸುವಲ್ಲಿ ನೆರವಾದವು.

ಸಾಮಾನ್ಯವಾಗಿ, ಎಲ್ಲಾ ಮಕ್ಕಳನ್ನು ತಲುಪಲು ಶಾಲೆಗಳು ಬಹುವಿಧಾನಗಳಿಗೆ ಮೊರೆ ಹೋಗಬೇಕಾಗುತ್ತದೆ. ಕೋವಿಡ್ ಹಿನ್ನೆಲೆಯಲ್ಲಿ ಎಲ್ಲರಿಗೂ ಸಮುದಾಯದ ತರಗತಿಗಳು ಲಭಿಸದೆ ಇದ್ದಾಗ, ಹಲವು ವಿಧಾನಗಳ ಮಿಶ್ರಣವನ್ನು ಬಳಸಲಾಯಿತು. ಉದಾಹರಣೆಗೆ, ಉಧಮ್‌ಸಿಂಗ್ ನಗರದ ಶಾಲೆಯಲ್ಲಿ ಶಿಕ್ಷಕರು ಐದು ವಿವಿಧ ವಿಧಾನಗಳನ್ನು, ಅಂದರೆ, ವಿಡಿಯೋ ಫೋನ್ ಕರೆ, ವಾಟ್ಸ್‌ಆಪ್ ಆಧರಿತ ಹಂಚಿಕೊಳ್ಳುವಿಕೆ, ಕಾರ್ಯಹಾಳೆಗಳು, ಮನೆಗಳಿಗೆ ವೈಯಕ್ತಿಕ ಭೇಟಿ ಹಾಗೂ ೧ ಮತ್ತು ೨ನೇ ತರಗತಿ ಮಕ್ಕಳನ್ನು ತಲುಪಲು ಸಮುದಾಯದ ತರಗತಿಗಳನ್ನು ಬಳಸಿದರು. ಕೆಲವು ವಿದ್ಯಾರ್ಥಿಗಳನ್ನು ೨ ರಿಂದ ೩ ವಿಧಾನಗಳ ಮೂಲಕ ಸಂಪರ್ಕಿಸಲಾಯಿತು: ಆದರೆ, ಯಾರನ್ನು ತಲುಪಲು ಸಾಧ್ಯವಾಗಲಿಲ್ಲವೋ ಅಂಥ ಬಹಳ ಸಣ್ಣ ಗುಂಪುಗಳಿಗೆ ಸಾಮುದಾಯಿಕ ತರಗತಿಗಳಿಗಾಗಿ ಮನೆಗೆ ಭೇಟಿ ನೀಡುವುದು ಉಳಿದ ಏಕೈಕ ಮಾರ್ಗವಾಗಿತ್ತು. ಇದೆಲ್ಲದರಿಂದಾಗಿ, ಶಿಕ್ಷಕರು ಬಿಡುವಿಲ್ಲದೆ, ನಿರಂತರವಾಗಿ ಕೆಲಸ ಮಾಡಬೇಕಾಯಿತು: ಆದರೆ, ಇದೆಲ್ಲದರಿಂದ ಕಲಿಕೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳಿಗೆ ಗಣನೀಯ ಲಾಭವೇನೂ ಆಗಲಿಲ್ಲ.

**ಕಳೆದ ವರ್ಷದಲ್ಲಿನ ಒಂದು ದಿನ**

ಟೊಂಕ್‌ನಲ್ಲಿ ನಾವು ಗ್ರಾಮಗಳಲ್ಲಿ ಮುಖಾಮುಖಿ ಗುಂಪು ಅಧ್ಯಯನವನ್ನು ಆರಂಭಿಸಿದಾಗ, ಹತ್ತು ನಿರ್ದಿಷ್ಟ ತಾಣಗಳು ಇದ್ದವು. ಇಲ್ಲಿ ವಿದ್ಯಾರ್ಥಿಗಳು ಪ್ರತಿದಿನ ಒಂದೂವರೆ ಗಂಟೆ ಕಾಲ ಪ್ರಾಥಮಿಕ ತರಗತಿ ಹಾಗೂ ಹಿರಿಯ ಪ್ರಾಥಮಿಕ ಗುಂಪುಗಳಲ್ಲಿ ಸೇರುತ್ತಿದ್ದರು:

* ದಿನಚರಿಯ ಓದು, ಇನ್ನಿತರ ಸ್ಥಳೀಯ ವಿಷಯಗಳು ಮತ್ತು ದಿನನಿತ್ಯದ ಯೋಜನೆಗಳನ್ನು ಪ್ರತಿದಿನ ಹಂಚಿಕೊಳ್ಳುವುದು
* ಎಲ್ಲರನ್ನು ಸೇರಿಸಿಕೊಂಡು ದೊಡ್ಡ ಗುಂಪು ಚಟುವಟಿಕೆಗಳು–ಗ್ರಂಥಾಲಯದ ಪುಸ್ತಕಗಳನ್ನು ಬಳಸಿಕೊಂಡು, ಆಯ್ಕೆ ಮಾಡಿಕೊಂಡ ವಿಷಯ ಅಥವಾ ವಸ್ತುವಿನ ಬಗ್ಗೆ ಚಟುವಟಿಕೆ
* ಸಾಮಾನ್ಯ ಚಟುವಟಿಕೆ ಅಥವಾ ವಿದ್ಯಾರ್ಥಿಗಳ ಸ್ಪರ್ಧಾತ್ಮಕತೆಯನ್ನು ಆಧರಿಸಿ, ಸಣ್ಣ ಗುಂಪು ಕೆಲಸಗಳು
* ಕಲಾ ಚಟುವಟಿಕೆಗಳು, ರೇಖಾಚಿತ್ರ, ಕರಕುಶಲ ಕಲೆ, ಗಾಯನ, ಡ್ರಮ್ ವಾದನ ಇತ್ಯಾದಿ ಮೂಲಕ ಅಂತ್ಯವಾಗುತ್ತಿದ್ದವು.

**ಎರಡನೇ ತರಗತಿಯ ಮಕ್ಕಳೊಂದಿಗೆ**

ಕೋವಿಡ್–೧೯ ಸುರಕ್ಷಾ ಶಿಷ್ಟಾಚಾರ ಆಚರಣೆ ಬಳಿಕ ಕಾರ್ಯಕ್ರಮವು ವ್ಯಾಯಾಮ, ನಿಂತಲ್ಲೇ ಜಿಗಿಯುವುದು, ಯೋಗ ಮತ್ತು ದೈಹಿಕ ಚಟುವಟಿಕೆಗಳು ಇಲ್ಲವೇ ಸರಳವಾದ ಆಟಗಳಿಂದ ಆರಂಭವಾಗುತ್ತಿತ್ತು. ಆನಂತರ ಕೆಲಕಾಲ ಧ್ಯಾನ ಮತ್ತು ಹಿಂದಿನ ತರಗತಿಯ ಪಾಠದ ಪುನರಾವರ್ತನೆ. ಬಳಿಕ ಎಲ್ಲ ವಿದ್ಯಾರ್ಥಿಗಳು ಹಿಂದಿ/ಇಂಗ್ಲಿಷ್ ಹಾಡುಗಳನ್ನು ಹಾಡುವುದು (ದಿನಬಿಟ್ಟು ದಿನ ಕಥೆ ಓದುವುದು), ಕತೆ, ಹಾಡು, ಅವರ ಅನುಭವ ಅಥವಾ ಕತೆಯೊಂದರ ಬಗ್ಗೆ ದ್ವಿಭಾಷೆಯಲ್ಲಿ ಮಾತುಕತೆ ಇಲ್ಲವೇ ಸಂವಾದ. ಕೆಲವೊಮ್ಮೆ ಶಿಕ್ಷಕರು ವಿಷಯಕ್ಕೆ ಸಂಬಂಧಿಸಿದ ಶ್ರಾವ್ಯ/ದೃಶ್ಯ ಸಂಪನ್ಮೂಲವನ್ನು ಬಳಸಿ ವಿದ್ಯಾರ್ಥಿಗಳಲ್ಲಿ ಕಲಿಕೆಯಲ್ಲಿ ಆಸಕ್ತಿ ಹುಟ್ಟಿಸಲು ಯತ್ನಿಸುತ್ತಿದ್ದರು. ಮಕ್ಕಳಿಗೆ ಕೂಡ ಹಿಂದಿ ಮತ್ತು ಇಂಗ್ಲಿಷ್‌ನ ಕತೆಪುಸ್ತಕಗಳು ಹಾಗೂ ಮಕ್ಕಳ ಸಾಹಿತ್ಯವನ್ನು ಓದಲು ಸ್ವಲ್ಪ ಸಮಯ ನೀಡಲಾಗುತ್ತಿತ್ತು. ಕಲಿಕೆಯನ್ನು ಆಸಕ್ತಿಕರವಾಗಿಸಲು ಕೆಲವು ಆಟಗಳನ್ನೂ

ಆಡಿಸಲಾಯಿತು. ಭಾಷೆ ಹಾಗೂ ಗಣಿತದ ಕಾರ್ಡುಗಳು ಇಲ್ಲವೇ ಚಿತ್ರಗಳ ಮೂಲಕ ಕಲಿಕೆಯನ್ನು ಆಸಕ್ತಿದಾಯಕವಾಗಿಸಲು ಪ್ರಯತ್ನಿಸಲಾಗುತ್ತಿತ್ತು. ಇಲ್ಲಿ ಮಕ್ಕಳು ಚಿತ್ರಗಳ ಬಗ್ಗೆ ಸಣ್ಣ ವಾಕ್ಯಗಳನ್ನು ಬರೆಯಬೇಕಿತ್ತು.

**ಸಾಂಕ್ರಾಮಿಕ ರೋಗದ ಕಾಲದಲ್ಲಿ ಕಲಿಕೆ:**

ಶಿಕ್ಷಕರು ಈ ಬಹುವಿಧಾನಗಳನ್ನು ಅನುಸರಿಸಿದರೂ, ಪ್ರತಿಯೊಂದು ಶಾಲೆಯಲ್ಲಿ ಶೇ.೨೦ರಷ್ಟು ಮಕ್ಕಳಿಗೆ ಈ ಕಲಿಕೆಯ ಲಾಭ ಪಡೆಯಲಾಗಲಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ: ವಿದ್ಯಾರ್ಥಿಗಳು ಸ್ವಂತ ಊರಿಗೆ ಹೋಗಿದ್ದು, ಪೋಷಕರ ಬಳಿ ಆನ್‌ಲೈನ್‌ನಲ್ಲಿ ವಿಷಯಗಳನ್ನು ಪಡೆದುಕೊಳ್ಳಲು ಫೋನ್ ಇಲ್ಲವೇ ಬೇರೆ ಸಂಪರ್ಕ ಸಾಧನಗಳು ಇಲ್ಲದಿದ್ದುದು, ಮನೆಗಳು ಬಹಳ ದೂರದಲ್ಲಿ ಇದ್ದುದು, ನೆಟ್‌ವರ್ಕ್ ಸಂಪರ್ಕ ದುರ್ಬಲವಾಗಿದ್ದುದು ಮತ್ತು ಕಷ್ಟಕರವಾದ ಕೌಟುಂಬಿಕ ಪರಿಸ್ಥಿತಿ. ಒಂದುವೇಳೆ ಪೋಷಕರು ಅಥವಾ ಕುಟುಂಬದ ಹಿರಿಯರು ಸಾಕ್ಷರರಾಗದ್ದಿದ್ದಾಗ್ಲ ಅಥವಾ ವ್ಯಾಸಂಗಕ್ಕೆ ಅಗತ್ಯ ಬೆಂಬಲ ನೀಡಲಾಗದಿದ್ದಾಗ, ವಿದ್ಯಾರ್ಥಿಗಳು ಅರ್ಥಪೂರ್ಣವಾದ ಶೈಕ್ಷಣಿಕ ನಿರಂತರತೆ ಕಾಯ್ದುಕೊಳ್ಳುವುದು ಹೆಚ್ಚು ಸವಾಲಿನ ಕೆಲಸವಾಗಿತ್ತು. ಸಾಂಕ್ರಾಮಿಕವು ಈಗಾಗಲೇ ತರಗತಿಗೆ ತಕ್ಕ, ವರ್ಗದ ಸಾಮರ್ಥ್ಯಗಳನ್ನು ಗಳಿಸಲು ಪ್ರಯಾಸ ಪಡುತ್ತಿದ್ದವರು ಮತ್ತು ಉತ್ತಮ ಸಾಧನೆ ಮಾಡುತ್ತಿರುವವರ ನಡುವಿನ ಕಂದಕವನ್ನು ಇನ್ನಷ್ಟು ಹೆಚ್ಚಿಸಿದ್ದನ್ನು ನಾವು ಕಂಡುಕೊಂಡೆವು. ಪ್ರಾಥಮಿಕ ಅಕ್ಷರ ಜ್ಞಾನ ಮತ್ತು ಸಂಖ್ಯಾಜ್ಞಾನ ಇಲ್ಲದವರನ್ನು ಓದು–ಬರಹ ಕೌಶಲ ಅಗತ್ಯವಿರುವ ವಿಷಯಗಳ ಮೂಲಕ ತೊಡಗಿಸಿಕೊಳ್ಳುವುದು ಕಷ್ಟಕರವಾಗಿದ್ದರಿಂದ, ಅವರು ಇನ್ನಷ್ಟು ಅನನುಕೂಲ ಪರಿಸ್ಥಿತಿಯಲ್ಲಿದ್ದರು. ಅದೇ ರೀತಿ ಪೂರ್ವ ಪ್ರಾಥಮಿಕ ಹಾಗೂ ಒಂದು ಮತ್ತು ಎರಡನೇ ತರಗತಿಯ ಮಕ್ಕಳನ್ನು ಕೂಡ ತೊಡಗಿಸಿಕೊಳ್ಳುವುದು ಕಷ್ಟಕರವಾಗಿತ್ತು. ಕಲಿಕಾ ನಷ್ಟ ಕುರಿತು ಮೂರ್ತವಾಗಿ ಹೇಳಬೇಕೆಂದರೆ, ಅವರಲ್ಲಿ ಹಲವರು ತಮ್ಮ ತರಗತಿ ಹಂತದ ಪಠ್ಯವನ್ನು ತಡವರಿಸದೆ ಓದಲು ಪರದಾಡುತ್ತಿದ್ದರು; ಕೆಲವರಿಗೆ ಅಕ್ಷರಗಳನ್ನು ಗುರುತಿಸಲು ಹಾಗೂ ಉಚ್ಚರಿಸಲು ಬಾರದೆ ಇದ್ದುದನ್ನು ನಾವು ಗಮನಿಸಿದೆವು. ಈ ಹಿಂದೆ ಸ್ವಂತ ವಾಕ್ಯಗಳು ಹಾಗೂ ಕತೆಗಳನ್ನು ರಚಿಸುತ್ತಿದ್ದವರು ಈಗ ಪರದಾಡುತ್ತಿದ್ದರು. ಹಲವರು ಗಣಿತದಲ್ಲಿ ಸಂಖ್ಯೆಗಳನ್ನು ಗುರುತಿಸಲು, ಸ್ಥಾನಿಕ ಮೌಲ್ಯ, ಶೇಷ, ದಶಕ ತೆಗೆದುಕೊಳ್ಳುವುದು, ದಶಮಾಂಶ ಇತ್ಯಾದಿ ಪರಿಕಲ್ಪನೆಗಳನ್ನು ಅರ್ಥ ಮಾಡಿಕೊಳ್ಳಲಾಗದೆ ಕಷ್ಟಪಡುತ್ತಿದ್ದರು ಮತ್ತು ಇಂಥ ವಿದ್ಯಾರ್ಥಿಗಳಲ್ಲಿ ಇದನ್ನೆಲ್ಲ ಮರುಪರಿಶೀಲಿಸುವ ಅಗತ್ಯವಿತ್ತು.

ಮಾರ್ಚ್ ೨೦೨೦ರ ಕಲಿಕಾ ಮಟ್ಟವನ್ನು ಆಧಾರವಾಗಿಟ್ಟುಕೊಂಡು, ನಾವು ವಿದ್ಯಾರ್ಥಿಗಳ ಕಲಿಕಾ ಮಟ್ಟದ ಹೋಲಿಕೆ ಮಾಡಿದೆವು. ಕೆಳಗಿನ ಕೋಷ್ಠಕದಲ್ಲಿನ ಅಂಕಿಅಂಶ ತೋರಿಸುವುದೇನೆಂದರೆ, ಹಂತ ೧ ರಲ್ಲಿ (ತರಗತಿಗಿಂತ ಕೆಳಗಿನ ಹಂತ) ವಿದ್ಯಾರ್ಥಿಗಳ ಸಂಖ್ಯೆಯನ್ನು ಕಡಿಮೆ ಮಾಡುವಲ್ಲಿ ನಾವು ಯಶಸ್ವಿಯಾದೆವು; ಉಳಿದ ಹಂತಗಳಲ್ಲಿ ಕನಿಷ್ಠ ಪಕ್ಷ ಅದೇ ಮಟ್ಟವನ್ನು ಕಾಯ್ದುಕೊಂಡೆವು ಅಥವಾ ಸ್ವಲ್ಪಮಟ್ಟಿಗೆ ಉತ್ತಮಪಡಿಸಿಕೊಂಡೆವು. ಹೆಚ್ಚಿನ ಪಾಲು ವಿದ್ಯಾರ್ಥಿಗಳೊಂದಿಗೆ ನಾವು ಸ್ವಲ್ಪಮಟ್ಟಿನ ಶೈಕ್ಷಣಿಕ ಸಂಪರ್ಕವನ್ನು ಉಳಿಸಿಕೊಂಡಿದ್ದೆವು ಎಂಬ ಹಿನ್ನೆಲೆಯಲ್ಲಿ ಇದನ್ನು ಪರಿಗಣಿಸಬೇಕಾಗುತ್ತದೆ. ಕಳೆದ ೧೮ ತಿಂಗಳಿನಿಂದ ವ್ಯಾಸಂಗದಲ್ಲಿ ನಿರಂತರತೆ ಇಲ್ಲದೆ ಇದ್ದುದರಿಂದ ಕಲಿಕೆಯಲ್ಲಿ ಆದ ನಷ್ಟವನ್ನು ಯಾರಾದರೂ ಊಹಿಸಬಹುದು. ನಾವು ಹಂತಗಳನ್ನು ವರ್ಗೀಕರಿಸಿದ್ದು ಹೀಗೆ:

ಹಂತ ೩: ತರಗತಿ ಹಂತದಲ್ಲಿ ಕಲಿಕೆ ಮಾಡುತ್ತಿರುವವರು

ಹಂತ ೨: ತರಗತಿ ಹಂತದಲ್ಲಿ ಕಲಿಕೆಗೆ ಶಿಕ್ಷಕರ ಮಾರ್ಗದರ್ಶನ ಹಾಗೂ ನೆರವು ಬೇಕಾದವರು
ಹಂತ ೧: ತರಗತಿ ಹಂತಕ್ಕಿಂತ ಕೆಳಗಿನವರು ಮೊದಲಿನ ವರ್ಗದ ಸಾಮರ್ಥ್ಯವನ್ನು ಕಲಿಯಬೇಕಾದವರು.

ಸಂಜ್ಞಾನಾತ್ಮಕ ಕಲಿಕೆ ನಷ್ಟ ಮಾತ್ರವಲ್ಲದೆ, ಶಾಲಾ ತಂಡವು ಕೆಲವು ಮಕ್ಕಳಲ್ಲಿ ವರ್ತನಾ ಬದಲಾವಣೆಗಳನ್ನು ಗಮನಿಸಿತು. ಇದಕ್ಕೆ ನಿಯಮಿತ ಆರೋಗ್ಯ ದಿನಚರಿಯಿಲ್ಲದ್ದು ಹಾಗೂ ಸುರಕ್ಷಿತ ಶಾಲಾ ಪರಿಸರದಿಂದ ಹೊರತಾಗಿದ್ದದು ಕಾರಣವಾಗಿತ್ತು. ಇದರಲ್ಲಿ ವೈಯಕ್ತಿಕ ಶುಚಿತ್ವ ಕಡಿಮೆಯಾಗುವಿಕೆ (ಉದಾಹರಣೆ, ಉಗುರು ಕತ್ತರಿಸುವುದು, ತಲೆ ಬಾಚುವುದು ಮತ್ತು ಗಾಯ–ಪೆಟ್ಟುಗಳಿಗೆ ಉಪಚಾರ), ಗಮನ ಕೇಂದ್ರೀಕರಿಸುವಿಕೆಯಲ್ಲಿ ಕುಸಿತ, ಜಗಳಗಂಟತನ ಮತ್ತು ಪಕ್ಷಪಾತ ಪ್ರವೃತ್ತಿಯ ಹೆಚ್ಚಳ, ಭಾವನೆಗಳ ನಿರ್ವಹಣೆಯಲ್ಲಿ ಅಸಾಮರ್ಥ್ಯ ಇತ್ಯಾದಿ. ಕೆಲವು ವಿದ್ಯಾರ್ಥಿಗಳು ತಮ್ಮ ಆರೋಗ್ಯ ಹಾಗೂ ಸುರಕ್ಷತೆಗೆ ವಿರುದ್ಧವಾದ ಬೈಗುಳದ ಭಾಷೆಯನ್ನು ಕಲಿತಿದ್ದರು. ಇದು ಶಾಲೆಗಳು ಗಮನ ನೀಡಬೇಕಾದ ಇನ್ನೊಂದು ಅಂಶವಾಗಿತ್ತು.

**ಶಿಕ್ಷಕರ ಕಲಿಕೆ ಮತ್ತು ಪಡೆದ ಒಳನೋಟಗಳು:**

ವಿದ್ಯಾರ್ಥಿಗಳನ್ನು ಹಲವು ವಿಧಗಳಲ್ಲಿ ತೊಡಗಿಸಿಕೊಳ್ಳಬೇಕಾದ್ದು ಶಿಕ್ಷಕರಿಗೆ ಕೆಲವು ಕಲಿಕಾ ಅವಕಾಶಗಳನ್ನು ಒದಗಿಸಿತು ಹಾಗೂ ಶಾಲಾ ತಂಡಗಳಿಗೆ ಬೋಧನಾವಿಧಾನದ ಬಗ್ಗೆ ಉತ್ತಮ ಆಲೋಚನೆಗಳನ್ನು ನೀಡಿತು. ಇದು ವಿದ್ಯಾರ್ಥಿಗಳ ಕಲಿಕೆಯ ಮೇಲೆ ಗರಿಷ್ಠ ಪರಿಣಾಮ ಬೀರಿತು. ಈ ಅನುಭವಗಳಿಂದ ಪಡೆದುಕೊಂಡ ಹಲವು ಒಳನೋಟಗಳು ನಮಗೆ ಪ್ರಸ್ತುತ ಸಂದರ್ಭವನ್ನು ಸಮರ್ಥವಾಗಿ ಎದುರಿಸಲು ನೆರವಾದವಲ್ಲದೆ, ಒಮ್ಮೆ ಶಾಲೆಗಳು ಆರಂಭವಾದ ಬಳಿಕ ಉಪಯುಕ್ತವಾಗಲಿವೆ. ಇವು ದೀರ್ಘಕಾಲದಲ್ಲಿ ಇನ್ನಷ್ಟು ಸ್ಥಿತಿಸ್ಥಾಪಕ ಶಕ್ತಿಯುಳ್ಳ ಮತ್ತು ಸುಸ್ಥಿರವಾದ  ಬೋಧನಾವಿಧಾನಕ್ಕೆ ದಾರಿಮಾಡಿಕೊಡಲಿವೆ. ಕೆಲವು ಒಳನೋಟಗಳನ್ನು ಸಂಕ್ಷಿಪ್ತವಾಗಿ ಕೆಳಗೆ ಉಲ್ಲೇಖಿಸಲಾಗಿದೆ:

* ಬಹು ಹಂತದ, ಬಹು ದರ್ಜೆಗಳ ತರಗತಿ ವ್ಯಾಸಂಗಕ್ರಮವನ್ನು ಯೋಜಿಸುವುದು.
ಶಿಕ್ಷಕರು ಭಾಷಾ ಸ್ಪರ್ಧಾತ್ಮಕತೆಯ ವಿವಿಧ ವಿಷಯಗಳನ್ನು ಸಮಾನ ವಿಷಯ ಇಲ್ಲವೇ ಗ್ರಂಥಾಲಯದಲ್ಲಿ ಆಯ್ಕೆ ಮಾಡಿದ ಪುಸ್ತಕಗಳ ಮೇಲೆ ಹಾಗೂ ವರ್ಗೀಕೃತ ಕಾರ್ಯಹಾಳೆಗಳನ್ನು ಬಳಸುವ ಮೂಲಕ ತರಗತಿಯನ್ನು ನೆಲೆಗೊಳಿಸಬಹುದು. ಶಿಕ್ಷಕರು ಇಡೀ ತರಗತಿಗೆ ಸಾಮಾನ್ಯ ಯೋಜನೆಯೊಂದನ್ನು ಹೊಂದಿರಬಹುದಾದರೂ, ಪ್ರತಿಯೊಬ್ಬ ವಿದ್ಯಾರ್ಥಿಯ ಸ್ಪರ್ಧಾತ್ಮಕತೆ ಮಟ್ಟವನ್ನು ಅಳೆಯಲು ಪ್ರತ್ಯೇಕ ಕಾರ್ಯಹಾಳೆಗಳನ್ನು ಬಳಸಬೇಕಾಗುತ್ತದೆ. ಇದರಿಂದ, ವಿಶೇಷವಾಗಿ ಹೆಚ್ಚುವರಿ ಬೆಂಬಲದ ಅಗತ್ಯವಿರುವ ವಿದ್ಯಾರ್ಥಿಗಳಿಗೆ, ನಿರ್ದಿಷ್ಟ ವಿಷಯವನ್ನು ಆನಂತರದ ಕಾರ್ಯಹಾಳೆಗಳಿಗೆ ಸೇರಿಸಲು ಅವಕಾಶ ಸಿಗುತ್ತದೆ.

* ಪ್ರಾಥಮಿಕ ಸಾಕ್ಷರತೆ/ಸಂಖ್ಯಾಜ್ಞಾನವನ್ನು ಕಲಿಸಲು ಸಮಗ್ರ ಮಾರ್ಗವನ್ನು ಬಳಸುವುದು.
ಎಲ್ಲ ವಿಷಯ ಶಿಕ್ಷಕರು ಆಯಾ ವಿಷಯಗಳ ನಿಯತ ಪಠ್ಯಯೋಜನೆಯಲ್ಲಿ ಪ್ರಾಥಮಿಕ ಸಾಕ್ಷರತೆಯ ಕಲಿಕಾ ಫಲಿತಾಂಶಗಳನ್ನು ಏಕತ್ರಗೊಳಿಸಬೇಕು. ಉದಾಹರಣೆಗೆ, ೫ನೇ ತರಗತಿಯ ಇವಿಎಸ್ ಶಿಕ್ಷಕರು ತನ್ನ ವಿದ್ಯಾರ್ಥಿಗಳು ಇವಿಎಸ್‌ಗೆ ಸಂಬಂಧಿಸಿದ ಪಾಠಗಳನ್ನು ಅರ್ಥ ಮಾಡಿಕೊಂಡಿರುವುದನ್ನು ಖಾತ್ರಿಪಡಿಸಿಕೊಳ್ಳಬೇಕು, ವಿದ್ಯಾರ್ಥಿಗಳು ತಮ್ಮದೇ ಪದಗಳಲ್ಲಿ ತಾತ್ಪರ್ಯವನ್ನು ಬರೆಯಬೇಕು ಮತ್ತು ವ್ಯವಸ್ಥಿತ ರೂಪದಲ್ಲಿ ವ್ಯಾಖ್ಯಾನಿಸಬೇಕು–ಇವು ಭಾಷಾ ಕಲಿಕಾ ಫಲಿತಾಂಶಗಳು. ಇದೇ ರೀತಿ, ವಿದ್ಯಾರ್ಥಿಗಳು ಎಲ್ಲ ವಿಷಯಗಳಲ್ಲಿ ತಮ್ಮ ಭಾಷಾ ಕೌಶಲವನ್ನು ಅನ್ವಯಿಸಿ ಪಾಲಿಸಬೇಕು.

| ೫ ನೆ ತರಗತಿ (೨೦೨೦ ರಲ್ಲಿ ೩ ನೆ ತರಗತಿಯಲ್ಲಿದ್ದವರು) | | | | | |
|---|---|---|---|---|---|
| ವಿಷಯಗಳು | ಮೌಲ್ಯಮಾಪನ ಮಾಡಿದ ತಿಂಗಳು/ವರ್ಷ | ಒಟ್ಟು ವಿದ್ಯಾರ್ಥಿಗಳು | ಹಂತ ೧ | ಹಂತ ೨ | ಹಂತ ೩ |
| ಹಿಂದಿ/ಕನ್ನಡ | ಮಾರ್ಚ್ ೨೦೨೦ | ೨೧೪ | ೫೦ | ೪೧ | ೯೩ |
| | ಆಗಸ್ಟ್ ೨೦೨೧ | ೨೧೩ | ೩೦ | ೬೪ | ೮೯ |
| ಗಣಿತ | ಮಾರ್ಚ್ ೨೦೨೦ | ೨೧೪ | ೪೯ | ೪೮ | ೮೬ |
| | | ೨೧೩ | ೩೬ | ೫೯ | ೮೮ |
| ಇಂಗ್ಲೀಷ್ | | ೨೧೪ | ೭೨ | ೫೩ | ೫೮ |
| | | ೨೧೩ | ೬೨ | ೬೧ | ೬೦ |

| ೮ ನೆ ತರಗತಿ (೨೦೨೦ ರಲ್ಲಿ ೬ ನೆ ತರಗತಿಯಲ್ಲಿದ್ದವರು) | | | | | |
|---|---|---|---|---|---|
| ವಿಷಯಗಳು | ಮೌಲ್ಯಮಾಪನ ಮಾಡಿದ ತಿಂಗಳು/ವರ್ಷ | ಒಟ್ಟು ವಿದ್ಯಾರ್ಥಿಗಳು | ಹಂತ ೧ | ಹಂತ ೨ | ಹಂತ ೩ |
| ಹಿಂದಿ/ಕನ್ನಡ | ಮಾರ್ಚ್ ೨೦೨೦ | ೧೯೪ | ೪೪ | ೯೩ | ೫೭ |
| | ಆಗಸ್ಟ್ ೨೦೨೧ | ೧೯೨ | ೪೨ | ೯೪ | ೫೬ |
| ಗಣಿತ | ಮಾರ್ಚ್ ೨೦೨೦ | ೧೯೪ | ೬೯ | ೭೩ | ೫೧ |
| | | ೧೯೨ | ೪೪ | ೮೬ | ೬೨ |
| ಇಂಗ್ಲೀಷ್ | | ೧೯೪ | ೧೦೪ | ೬೩ | ೩೧ |
| | | ೧೯೨ | ೯೯ | ೫೬ | ೩೭ |

**ಕಲ್ಲುಗಳಿಂದ ಚರಿತ್ರೆಯ ಕಲಿಕೆ:**

ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಮಾಟ್ಲಿಯ ಅಜೀಂ ಪ್ರೇಮ್‌ಜಿ ಶಾಲೆಯಲ್ಲಿ ಶಿಕ್ಷಕರು ಎಲ್ಲ ಹಂತಗಳಲ್ಲಿ ವಿಷಯಗಳನ್ನು ಏಕತ್ರಗೊಳಿಸುತ್ತಿದ್ದಾರೆ. ಇತ್ತೀಚೆಗೆ, ಆರನೇ ತರಗತಿಯ ವಿದ್ಯಾರ್ಥಿಗಳಿಗೆ ಚರಿತ್ರೆಯ ಪಾಠವೊಂದನ್ನು ಕಲಿಸಲು ಶಿಲ್ಪಕೃತಿಗಳನ್ನು ಬಳಸಿದರು. ವಿದ್ಯಾರ್ಥಿಗಳು ಸುತ್ತಲಿನ ಸ್ವಾಭಾವಿಕ ವಸ್ತುಗಳು ಹಾಗೂ ಸಾಧನಗಳನ್ನು ಬಳಸಿಕೊಂಡು, ಸೃಜನಶೀಲ ಪ್ರಯೋಗಗಳನ್ನು ನಡೆಸಿದರು: ಮತ್ತು, ಚರಿತ್ರೆಯ

ವಾಸ್ತವಾಂಶಗಳನ್ನು ಕಲಿಯುತ್ತಲೇ ತಮ್ಮ ಉಪಕ್ರಮಗಳನ್ನು ವಾಚಿಕವಾಗಿ ಹೇಳಲು ಹಾಗೂ ಬರೆದು ತೋರಿಸಲು ಅತ್ಯುತ್ಸಾಹ ತೋರಿಸಿದರು.

*ಇನ್ನಿತರ ಕಾರ್ಯತಂತ್ರಗಳು:*

ಇಡೀ ವ್ಯಾಸಂಗಕಾಲವನ್ನು ಉದ್ದೇಶಪೂರ್ವಕ ಓದು ಮತ್ತು ಬರಹಕ್ಕಾಗಿ ಗ್ರಂಥಾಲಯದಲ್ಲಿ ಆಯೋಜಿಸಲಾಗಿತ್ತು. ವಿದ್ಯಾರ್ಥಿಗಳು ತಮಗಿಷ್ಟವಾದ ಪುಸ್ತಕಗಳನ್ನು ಓದಲು ಆಯ್ದುಕೊಳ್ಳಬಹುದಿತ್ತು ಮತ್ತು ಅದಕ್ಕೆ ಅನುಗುಣವಾಗಿ ಕಾರ್ಯನಿಗದಿ ಮಾಡಿಕೊಳ್ಳಬಹುದಿತ್ತು. ಇದು ಅವರಿಗೆ ಇಷ್ಟಬಂದ ಪುಸ್ತಕವನ್ನು ಆರಿಸಿಕೊಳ್ಳಲು ಸ್ವಾತಂತ್ರ್ಯ ಕೊಟ್ಟಿದ್ದಲ್ಲದೆ ಅವರ ವೈವಿಧ್ಯಮಯ ಆಸಕ್ತಿಗಳನ್ನು ಬೆಂಬಲಿಸಿತು.

ತೆರೆದ, ಮುಕ್ತವಾಗಿ ಓದುವ ಆಯ್ಕೆ ಮಾಡಿಕೊಳ್ಳುವುದರೊಂದಿಗೆ ಗ್ರಂಥಾಲಯದ ತರಗತಿ/ವ್ಯಾಸಂಗಕಾಲದೊಟ್ಟಿಗೆ ಕಾರ್ಯ ನಿರ್ವಹಿಸುವ ಕೌಶಲವಾಗಿ ನಡೆಯಬೇಕಿತ್ತು. ವಿದ್ಯಾರ್ಥಿಗಳು ತಾವು ಓದಿದ ಯಾವುದೇ ಪುಸ್ತಕ ಇಲ್ಲವೇ ತಮ್ಮ ಕಾರ್ಯಯೋಜನೆ ವೇಳೆಯಲ್ಲಿ ಗಮನಿಸಿದ ಯಾವುದೇ ಅಂಶದ ಬಗ್ಗೆ ಬರೆಯಬಹುದಿತ್ತು. ಜರ್ನಲ್‌ವೊಂದನ್ನು ಇಟ್ಟುಕೊಂಡು ಬರೆಯುತ್ತಾ ಸಹಪಾಠಿಗಳೊಡನೆ ಆಲೋಚನೆಗಳು ಮತ್ತು ಪರಿಕಲ್ಪನೆಗಳನ್ನು ಹಂಚಿಕೊಂಡು, ಅವರಿಂದ ಹಿಮ್ಮಾಹಿತಿ ಪಡೆದುಕೊಳ್ಳಬಹುದಿತ್ತು (ವ್ಯಾಕರಣದ ಬಗ್ಗೆ ಅಲ್ಲ).

ಪಾಠಗಳನ್ನು ಸ್ಥಳೀಯ ಸನ್ನಿವೇಶಗಳಲ್ಲಿ ಇರಿಸುವುದು ಮತ್ತು ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ, ಪಠ್ಯಗಳನ್ನು ಅವರ ಬದುಕಿಗೆ ಸಂಬಂಧಿಸುವಂತೆ ಮಾಡುವುದು ಹೆಚ್ಚು ಪರಿಣಾಮಕಾರಿ ಆಗಿರಲಿದೆ. ಉದಾಹರಣೆಗೆ, ತಮಗಿಷ್ಟವಾದ ಸ್ಥಳೀಯ ವ್ಯಾಪಾರದ ಮೂಲಕ ಲಾಭ–ನಷ್ಟಗಳ ಬಗ್ಗೆ ತಿಳಿದುಕೊಳ್ಳುವುದು. ಉದಾಹರಣೆಗೆ, ಸಂತೆಯಲ್ಲಿ/ರಸ್ತೆ ಬದಿಯಲ್ಲಿ ವ್ಯಾಪಾರ ಮಾಡುವುದು.

ಯಾದಗಿರಿಯಲ್ಲಿ ವಿದ್ಯಾರ್ಥಿಗಳಿಗೆ ಸ್ಥಳೀಯ ಜನಪದ ಸಂಪ್ರದಾಯಗಳಲ್ಲಿರುವ ಹಾಡುಗಳು ಮತ್ತು ಕತೆಗಳನ್ನು ದಾಖಲಿಸುವ ಕೆಲಸ ಕೊಡಲಾಯಿತು. ಮಕ್ಕಳು ತಮ್ಮ ಕುಟುಂಬ ಮತ್ತು ಸಮುದಾಯದಲ್ಲಿನ ಜನಪದ ಕಲಾವಿದರ ಸಂದರ್ಶನ ಮಾಡಿ, ಈ ಜೀವಂತ ಸಂಪ್ರದಾಯ ಚರಿತ್ರೆಗಳನ್ನು ಅನಾವರಣಗೊಳಿಸಿದರು– ಅವರು ಹೇಗೆ ಬಾಲ್ಯದಲ್ಲೇ ಇದನ್ನು ಕಲಿತರು ಮತ್ತು ಅದನ್ನು ಈಗ ಹಿರಿಯರಾಗಿ ಹೇಗೆ ಆದರಿಸುತ್ತಿದ್ದಾರೆ ಎಂಬುದನ್ನು ತಿಳಿದುಕೊಂಡರು. ಇದರಿಂದ ತಮ್ಮ ಪೋಷಕರು ಹಾಗೂ ಸಮುದಾಯದ ಹಿರಿಯರ ಬಗ್ಗೆ ಮಕ್ಕಳಿಗೆ ಗೌರವ ಹೆಚ್ಚಿತು.

ಬಾರ್ಮರ್‌ನಲ್ಲಿ ಮಳೆಗಾಲದಲ್ಲಿ, ಅತಿ ಕಡಿಮೆ ಮಳೆ ಬಿದ್ದರೂ, ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು, ಮಳೆ ನೀರು ಇಂಗಿಸುವ ವ್ಯವಸ್ಥೆಯನ್ನು ಸೃಷ್ಟಿಸಲು ವಿದ್ಯಾರ್ಥಿಗಳನ್ನು ಉತ್ತೇಜಿಸಲಾಯಿತು. ಈ ಚಟುವಟಿಕೆಯ ಹಿಂದೆಯೇ ಕಾರ್ಯಹಾಳೆ ಮೂಲಕ ಜಲಚಕ್ರವನ್ನು ಗಮನಿಸುವ ಹಾಗೂ ಮಳೆಯ ಪ್ರಕ್ರಿಯೆಯನ್ನು ಅರ್ಥ ಮಾಡಿಕೊಳ್ಳಲು ಅವಕಾಶ ನೀಡಲಾಯಿತು.

**ಇತರ ಒಳನೋಟಗಳು**

ವಿದ್ಯಾರ್ಥಿಗಳು, ಅವರ ಪೋಷಕರು ಹಾಗೂ ಸಮುದಾಯದೊಡನೆ ಉತ್ತಮ ಬಾಂಧವ್ಯ ಇರಿಸಿಕೊಳ್ಳುವ ಅಗತ್ಯವಿದೆ. ಏಕೆಂದರೆ, ಇದು ವಿದ್ಯಾರ್ಥಿಗಳು ಶಿಕ್ಷಣ ಮುಂದುವರಿಸುವಿಕೆ ಮತ್ತು ಕಲಿಕೆ ಮೇಲೆ ನೇರ ಪರಿಣಾಮ ಬೀರುತ್ತದೆ. ಸಾಂಕ್ರಾಮಿಕದ ಕಾಲದಲ್ಲಿ ತಮ್ಮ ಮನೆ ಅಥವಾ ರಸ್ತೆಗಳು ಕಲಿಕೆಯ ಸ್ಥಳವಾಗುವುದನ್ನು ಕಂಡ ಜನರು, ಶಾಲೆ ಹಾಗೂ ಶಿಕ್ಷಕರ ಕುರಿತ ತಮ್ಮ ಭಾವನೆಗಳನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡಿದ್ದನ್ನು ನಾವು ಕಂಡೆವು. ಹೆಚ್ಚು ನಂಬಿಕೆ, ಪರಸ್ಪರ ಮುಖಾಮುಖಿಯಾದಾಗ ಸೂಕ್ಷ್ಮತೆ ಮತ್ತು ಪ್ರಯತ್ನಗಳಲ್ಲಿ ಸಹಕಾರ ಇವೆಲ್ಲವೂ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣಕ್ಕೆ ದಾರಿ ಮಾಡಿಕೊಟ್ಟವು.

ಇನ್ನೊಂದು ಒಳನೋಟವೆಂದರೆ, ಹಳೆಯ ವಿದ್ಯಾರ್ಥಿಗಳನ್ನು ತೊಡಗಿಸಿಕೊಂಡಲ್ಲಿ ಪ್ರಯೋಜನವಿದೆ ಎಂಬುದು. ಅವರು ಸಮುದಾಯದಲ್ಲಿ ನಮ್ಮ ಪ್ರತಿನಿಧಿಗಳಾಗಿರಲಿದ್ದು, ಸಮುದಾಯವನ್ನು ಸಜ್ಜುಗೊಳಿಸಲು ನೆರವಾದರು. ಅವರ ಯಶಸ್ಸು ಯುವ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿತು.

ಇಲ್ಲಿ ಗಮನಿಸಬೇಕಾದ ಆಶ್ಚರ್ಯಕರ ಅಂಶವೆಂದರೆ, ಬೋಧನಾವಿಧಾನ ಕುರಿತ ಈ ಒಳನೋಟಗಳು ಎಲ್ಲ ಉತ್ತಮ ಶಿಕ್ಷಕರಿಂದ ಸಾಮಾನ್ಯವಾಗಿ ನಿರೀಕ್ಷಿಸುವಂಥವು: ಆದರೂ ನಮಗೆ ಗೊತ್ತು, ಅನೇಕ ಶಿಕ್ಷಕರು ಈ ಸಲಹೆಗಳನ್ನು ಅನುಸರಿಸುವುದಿಲ್ಲವೆಂದು. ಕೋವಿಡ್-೧೯ ಸಾಂಕ್ರಾಮಿಕವು ಪಠ್ಯಪುಸ್ತಕ ಹಾಗೂ ತರಗತಿ ಕೊಠಡಿಯನ್ನು ಕೇಂದ್ರವಾಗುಳ್ಳ ಶಿಕ್ಷಣವು ತನ್ನ ಪರಿಧಿಯನ್ನು ದಾಟಬೇಕಾದ ಸನ್ನಿವೇಶಗಳನ್ನು ಸೃಷ್ಟಿಸಿತು. ನಾವು ಕಲಿತ ಎಲ್ಲದರ ಬಗ್ಗೆ ಚಿಂತನೆ ನಡೆಸಿದಾಗ, ನಾವು ಅನುಸರಿಸಿದ ಮಾರ್ಗಗಳು ಮತ್ತು ವಿಧಾನಗಳು ಯಾವುದೇ ಸಾಮಾನ್ಯ ಶಾಲಾ ಕಲಿಕೆಗಿಂತಲೂ ಉತ್ತಮವಾಗಿದ್ದವು ಮತ್ತು ಶಾಲೆಗಳು ತೆರೆದ ಬಳಿಕ ಅವುಗಳ ಬಳಕೆಯನ್ನು ಮುಂದುವರಿಸಬಹುದು ಎನ್ನುವುದು ನಮಗೆ ಅರ್ಥವಾಯಿತು.

**ಮುಂದಿನ ನೋಟ:**

ನಮ್ಮ ವಿದ್ಯಾರ್ಥಿಗಳೊಂದಿಗೆ ನಿರಂತರ ಸಂಪರ್ಕದಲ್ಲಿರುವುದರಿಂದ ಮತ್ತು ನಾನಾ ವಿಧಾನಗಳ ಮೂಲಕ ಅವರನ್ನು ಶೈಕ್ಷಣಿಕವಾಗಿ ತೊಡಗಿಸಿಕೊಳ್ಳುವುದರಿಂದ, ನಮಗೆ ಹಲವು ಪ್ರಯೋಜನ ಆಗಿದೆ. ಕೋವಿಡ್-೧೯ ರ ಕಾಲಘಟ್ಟವು ಶಿಕ್ಷಕರನ್ನು ವೈವಿಧ್ಯಮಯ ಕಲಿಕಾ ಹಂತಗಳನ್ನು ಅಳವಡಿಸಿಕೊಳ್ಳಲು ಉತ್ತಮವಾಗಿ ಸನ್ನದ್ಧಗೊಳಿಸಿತು. ದೊಡ್ಡ ಪ್ರಶ್ನೆಯೇನೆಂದರೆ, ಕಲಿಕೆಯಲ್ಲಿನ ಭಾರಿ ಕಂದರವನ್ನು ವಿಸ್ತೃತವಾಗಿ ಅರ್ಥ ಮಾಡಿಕೊಳ್ಳುವುದು ಮತ್ತು ಶಿಕ್ಷಕರು ಇಲ್ಲವೇ ವಿದ್ಯಾರ್ಥಿಗಳ ಮೇಲೆ ಅನಗತ್ಯವಾಗಿ ಒತ್ತಡ ಹೇರದೆ, ಇಂಥ ಒತ್ತಡಗಳು ತದ್ವಿರುದ್ಧ ಪರಿಣಾಮ ಬೀರುವುದರಿಂದ, ಈ ಕಂದರಗಳನ್ನು ಭರ್ತಿ ಮಾಡಲು ತ್ವರಿತವಾಗಿ ಕ್ರಮ ತೆಗೆದುಕೊಳ್ಳುವುದು.

ವಿದ್ಯಾರ್ಥಿಗಳಿಗಾಗಿ ನಮ್ಮ ಬಳಿ ಇರುವ ಯೋಜನೆಗಳೆಂದರೆ,

೧. ಎಲ್ಲ ಮಕ್ಕಳನ್ನು ನಿಯತ ಶಾಲಾ ಪರಿಪಾಠಗಳು ಮತ್ತು ರಾಚನಿಕ ಕಲಿಕಾ ದಿನಚರಿಗೆ ನಿಧಾನವಾಗಿ ಅನುಗೊಳಿಸುವಿಕೆ. ದೀರ್ಘಕಾಲ ಕೆಲಸ ಮಾಡುವುದು ಮತ್ತು ಕುಳಿತುಕೊಳ್ಳುವುದು ಅವರಿಗೆ ಕಷ್ಟವಾಗುತ್ತಿರುವುದರಿಂದ, ಇದು ಮುಖ್ಯವಾಗಲಿದೆ.

೨. ನಮಗೆ ಕಲಿಕೆಯಲ್ಲಿ ಅದರಲ್ಲೂ, ಭಾಷೆ ಮತ್ತು ಗಣಿತದಲ್ಲಿ ಆದ ನಷ್ಟದ ಬಗ್ಗೆ ಅರಿವು ಇರುವುದರಿಂದ, ಯಾವುದು ಉಳಿದುಕೊಂಡಿದೆ ಮತ್ತು ಯಾವುದು ಕಳೆದುಹೋಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ಎಲ್ಲ ಶಿಕ್ಷಕರು ಗಂಭೀರ ಪ್ರಯತ್ನ ಮಾಡಬೇಕಿದೆ. ಇದು ಸಮಾಜವಿಜ್ಞಾನ ಮತ್ತು

ವಿಜ್ಞಾನ ವಿಷಯದಲ್ಲಿ ಹೆಚ್ಚು ಅಗತ್ಯವಿದ್ದು, ಇವುಗಳ ಬಗ್ಗೆ ನಾವು ಸಾಂಕ್ರಾಮಿಕ ಸಂದರ್ಭದಲ್ಲಿ ಹೆಚ್ಚು ಗಮನ ನೀಡಲು ಸಾಧ್ಯವಾಗಿರಲಿಲ್ಲ.

೩. ಈ ವರ್ಷದ ಉಳಿದ ಶೈಕ್ಷಣಿಕ ಅವಧಿಗೆ ನಾನಾ ವರ್ಗಗಳು ಹಾಗೂ ವಿಷಯಗಳ "ಪಠ್ಯಕ್ರಮ ಪುನರಾವರ್ತನೆ"ಯನ್ನು ನಾವು ಆರಂಭಿಸಿದೆವು. ಒಂದೆಡೆ, ಈ ಚಟುವಟಿಕೆಯು ವಿಷಯ/ತರಗತಿಯೊಂದರ ನಿರೀಕ್ಷಿತ ಕಲಿಕಾ ಫಲಿತಾಂಶದ ಬಗ್ಗೆ ಹೇಳಿದರೆ, ಇನ್ನೊಂದೆಡೆ ನಮ್ಮ ವಿದ್ಯಾರ್ಥಿಗಳ ಪ್ರಸ್ತುತ ಕಲಿಕಾ ಮಟ್ಟದ ಬಗ್ಗೆಯೂ ಹೇಳುತ್ತದೆ.

೪. ಪರಿಷ್ಕರಣಗೊಂಡ ಪಠ್ಯಕ್ರಮವು ಶಿಕ್ಷಣ ಕಾರ್ಯಕ್ಕೆ ಮಾರ್ಗದರ್ಶನ ಮಾಡುತ್ತದೆ. ಆರಂಭದ ಮೊದಲ ಕೆಲ ತಿಂಗಳು ಹಿಂದಿನ ತರಗತಿಗಳ ಕಲಿಕಾ ಪರಿಕಲ್ಪನೆಗಳು ಮತ್ತು ಕೌಶಲಗಳ ಮರುಪರಿಚಯ/ಕಲಿಕೆಗೆ ಒತ್ತು ನೀಡಲಾಗುತ್ತದೆ. ಕೆಲವು ವಿದ್ಯಾರ್ಥಿಗಳಿಗೆ ಇದು ಪುನರ್‌ಮನನವಾಗಲಿದೆ ಮತ್ತು ಅವರು ಪಾಠದಲ್ಲಿ ಹಿಂದುಳಿದವರಿಗೆ ಕಲಿಸಲು ಶಿಕ್ಷಕರಿಗೆ ನೆರವಾಗಲಿದ್ದಾರೆ.

೫. ಪ್ರಾಥಮಿಕ ಹಂತದಲ್ಲಿ ವಿಷಯ ಕಲಿಕಾ ಉದ್ದೇಶ(ಎಲ್‌ಒ)ಗಳಿಗೆ ಅನುಗುಣವಾಗಿ ಕಾರ್ಯಹಾಳೆಗಳನ್ನು ಅಭಿವೃದ್ಧಿಪಡಿಸಿದ್ದು, ಅವನ್ನು ಪಠ್ಯಪುಸ್ತಕದ ಅಧ್ಯಾಯಗಳಿಗೆ ಹೊಂದಿಸಲಾಗಿದೆ. ಮಕ್ಕಳ ಕಲಿಕಾ ಹಂತಗಳನ್ನು ಕಂಡುಹಿಡಿಯಲು ಮತ್ತು ಹಿಂದಿನ ತರಗತಿಗಳಲ್ಲಿ ಏನನ್ನು ಕಲಿತಿದ್ದೇವೆ ಎಂಬುದನ್ನು ನೆನಪಿಸಿಕೊಳ್ಳಲು ಇದು ಉಪಯುಕ್ತವಾಗಲಿದೆ. ಉದಾಹರಣೆಗೆ, ೫ನೇ ತರಗತಿಯ ವಿದ್ಯಾರ್ಥಿ ೩ನೇ ತರಗತಿಯ ಕಾರ್ಯಹಾಳೆಗಳಿಂದ ಆರಂಭಿಸಿ, ಕ್ರಮೇಣ ೫ನೇ ತರಗತಿಯ ಹಂತಕ್ಕೆ ಏರಬಹುದು.

೬. ನಾವು ಪ್ರಾಥಮಿಕ ಸಾಕ್ಷರತೆ ಮತ್ತು ಸಂಖ್ಯಾಜ್ಞಾನದಲ್ಲಿ ಕಷ್ಟಪಡುತ್ತಿರುವ ವಿದ್ಯಾರ್ಥಿಗಳನ್ನು ಗುರುತಿಸಿದ್ದು, ಅವರಿಗೆ ಕೆಲವು ತಿಂಗಳುಗಳ ಕಾಲ ನಿಯತ ತರಗತಿಯಲ್ಲಿ ಹಾಗೂ ಹೆಚ್ಚುವರಿ ಪರಿಹಾರ ತರಗತಿ ನಡೆಸಿ, ಈ ಕೌಶಲಗಳನ್ನು ಕಲಿಸುವ ಗುರಿ ಇರಿಸಿಕೊಳ್ಳಲಾಗಿದೆ.

೭. ಅದೇ ರೀತಿ, ಪ್ರಾಥಮಿಕ ತರಗತಿಗೆ ಅಥವಾ ಒಂದು ಮತ್ತು ೨ನೇ ತರಗತಿಗೆ ೨೦೨೦ ಅಥವಾ ೨೦೨೧ರಲ್ಲಿ ಸೇರಿದ ಮಕ್ಕಳು ನಮ್ಮಲ್ಲಿ ಇದ್ದಾರೆ. ಇವರ ಜೊತೆಗೆ ಹೆಚ್ಚು ಕೆಲಸ ಮಾಡಲು ಆಗದೆ ಇರುವುದರಿಂದ ಅವರಿಗಾಗಿ ಬೇರೆಯದೇ ಯೋಜನೆ ರೂಪಿಸುವ ಅಗತ್ಯವಿದೆ.


೮. ಪ್ರಸ್ತುತ ನಾವು ತರಗತಿ ಹಂತದಲ್ಲಿ ಸ್ವಲ್ಪಮಟ್ಟಿಗೆ ಕೆಲಸ ಮಾಡಬಲ್ಲವರೊಟ್ಟಿಗೆ ತರಗತಿ ಪಠ್ಯಕ್ರಮದನ್ವಯ ಮುಂದುವರಿಯುತ್ತೇವೆ. ಇವರಿಗೆ ಕೊಡಲಾಗುವ ಕೆಲಸಗಳು ಹೆಚ್ಚು ಪಾಲು ಗುಂಪು–ಯೋಜನೆ ಆಧರಿತವಾದವು ಮತ್ತು ಸ್ವಯಂಕಲಿಕೆ ವಿಧಾನದ ಕಾರ್ಯಹಾಳೆಗಳಾಗಿರುತ್ತವೆ.

೯. ಸಂವಾದಕ್ಕೆ ಸಮಯ ಮೀಸಲಿಡುವ ಮೂಲಕ ಮಕ್ಕಳ ಸಾಮಾಜೋ–ಭಾವನಾತ್ಮಕ ಅಗತ್ಯಗಳನ್ನು ಪರಿಹರಿಸುವುದು. ದಿನವಹಿ ಆಚರಣೆಗಳು, ಕಲೆ, ಸಂಗೀತ, ನಾಟಕ ಮತ್ತು ದೈಹಿಕ ಶಿಕ್ಷಣ ಈ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಲಿವೆ.

೧೦.ಮುಂದಿನ ತಿಂಗಳುಗಳಲ್ಲಿ ಕೋವಿಡ್-೧೯ರಿಂದ ಶಾಲೆಗಳನ್ನು ಮುಚ್ಚಬೇಕಾಗಿ ಬಂದಲ್ಲಿ ಅದಕ್ಕೆ ಸಿದ್ಧರಾಗಿರಬೇಕಾಗುತ್ತದೆ. ಒಂದು ವೇಳೆ ಲಾಕ್‌ಡೌನ್ ಆದಲ್ಲಿ ನಾವು ಕಲಿತ ವಿದ್ಯೆ ಪ್ರಯೋಜನಕ್ಕೆ ಬರಲಿದ್ದು, ತಕ್ಷಣ ಬಹುವಿಧಾನಗಳ ಮೂಲಕ ಕಲಿಕೆಯ ತೊಡಗುವಿಕೆಗೆ ಹಿಂತಿರುಗಬಹುದು.



ಕೊಳದ ಬಳಿ ಸಾಮುದಾಯಿಕ ಶಾಲೆ



ವಿದ್ಯಾರ್ಥಿಗಳಿಂದ ಕಲ್ಲಿನಲ್ಲಿ ಕಲೆ


ಸಮುದಾಯ ಶಾಲೆಯಾಗಿ ದೇವಸ್ಥಾನದ ಬಳಕೆ

***

**ಮಾಳವಿಕಾ ರಾಜನಾರಾಯಣ್** ಗುಜರಾತ್‌ನ ವಡೋದರದ ದೃಶ್ಯ ಮಾಧ್ಯಮ ಕಲಾವಿದೆ. ೨೦೧೭ರಲ್ಲಿ ಅಜೀಂ ಪ್ರೇಮ್‌ಜಿ ಫೌಂಡೇಷನ್‌ನ ಫೆಲೋಶಿಪ್ ಆಗಿ ಸೇರಿದರು. ಪ್ರಸ್ತುತ ಅಜೀಂ ಪ್ರೇಮ್‌ಜಿ ಶಾಲೆಗಳಲ್ಲಿ ಕಲೆ ಮತ್ತು ಸಂಗೀತದ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಮತ್ತು ವಡೋದರದಲ್ಲಿ ತಮ್ಮ ಸ್ವಂತ ಕಲಾ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕಲೆ ಮತ್ತು ಶಿಕ್ಷಣದ ಬಗ್ಗೆ ಬರೆಯುತ್ತಾರೆ. ಇಮೇಲ್:.malavika.rajnarayan@gmail.com

**ಜಿತಂದ್ರ ಶರ್ಮ:** ಅಜೀಂ ಪ್ರೇಮ್‌ಜಿ ಫೌಂಡೇಷನ್‌ನಲ್ಲಿ ಸಾಮರ್ಥ್ಯ ನಿರ್ಮಾಣ ಕಾರ್ಯಕ್ರಮಗಳನ್ನು ಸಂಯೋಜಿಸುತ್ತಾರೆ ಹಾಗೂ ಹಲವು ಕಡೆ ಕಾರ್ಯ ನಿರ್ವಹಿಸುತ್ತಿರುವ ಅಜೀಂ ಪ್ರೇಮ್‌ಜಿ ಶಾಲೆಗಳಿಗೆ ಶೈಕ್ಷಣಿಕ ಸಂಯೋಜನೆ ಮತ್ತು ಬೆಂಬಲ ಒದಗಿಸುತ್ತಾರೆ. ಶಿಕ್ಷಕ, ಪ್ರಶಿಕ್ಷಕನಾಗಿ ಹಲವು ವರ್ಷಗಳ ಅನುಭವ ಹೊಂದಿದ್ದಾರೆ. ಮಕ್ಕಳು ಹಾಗೂ ಶಿಕ್ಷಕರೊಟ್ಟಿಗೆ ಕಾರ್ಯ ನಿರ್ವಹಿಸುವುದು ಅವರಿಗೆ ಇಷ್ಟ. ಇಮೇಲ್: jitandra.sharma@azimpremjifoundation.org